# ತಂತ್ರಜ್ಞಾನ ಆಧಾರಿತ ಜಾಗತಿಕ ಸವಾಲಿಗೆ ಸಜ್ಜುಗೊಳ್ಳಿ ಅಭಯ್ ಚಬ್ಬಿ

# ವಿದ್ಯುತ್ ಚಾಲಿತ ವಾಹನಗಳ ಭವ್ಯ ಭವಿಷ್ಯ

**ಆನೇಕಲ್:** ಜಾಗತಿಕ ತಾಪಮಾನ ತಡೆಯುವ ನಿಟ್ಟಿನಲ್ಲಿ ಪರಿಸರ ಪ್ರೇಮಿ ಹಾಗೂ ಇಂಧನ ಬಳಕೆ ರಹಿತ ವಾಹನಗಳ ಉತ್ಪಾದನೆ, ಮಾರುಕಟ್ಟೆ, ಮಾರಾಟ ನಂತರ ಸೇವೆ ಮುಂತಾದ ವಿಬಾಗಗಳು ಅತ್ಯುತ್ತಮ ಉದ್ಯೋಗ ದೊರೆಯಬಹುದಾದ ವಿಭಾಗಗಳಾಗಿದ್ದು ಉದ್ಯಮಿಗಳು, ಉದ್ಯೋಗಾಂಕ್ಷಿಗಳು ಭವಿಷ್ಯ ರೂಪಿಸಿಕೊಳ್ಳಲು ವಿಪುಲ ಅವಕಾಶವಿದೆ ಎಂದು ಅಲಯನ್ಸ್ ವಿವಿಯ ಸಹ ಕುಲಾಧಿಪತಿ ಅಭಯ್ ಚಬ್ಬಿ ತಿಳಿಸಿದರು.

ಅವರು ಆನೇಕಲ್ಲಿನ ಅಲಯನ್ಸ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ತಂತ್ರಜ್ಞಾನ ಸಮಾವೇಶ-2022 ಉದ್ಘಾಟಿಸಿ ಮಾತನಾಡಿ ಮುಂದುವರಿದ ರಾಷ್ಟಗಳ ಸಾಲಿನಲ್ಲಿ ಮುಂಚೂಣಿಯಲ್ಲಿರುವ ಭಾರತದಲ್ಲಿ ಬಂಡವಾಳ ಹೂಡಲು ವಿಶ್ವದ ಅನೇಕ ರಾಷ್ಟಗಳು ಸಾಲುಗಟ್ಟಿ ನಿಂತಿವೆ. ಕೈಗಾರಿಕೆಗಳು ನಡೆಯಲು ಕೌಶಲ್ಯ ಭರಿತ, ತಂತ್ರಜ್ಞಾನ ಅರಿತ ಯುವ ಸಮೂಹ ಬೇಕಿದ್ದು ಉದ್ಯಮಿಗಳು ಶ್ರೇಷ್ಠವಾದುದನ್ನೇ ಆಯ್ಕೆ ಮಾಡುತ್ತಾರೆ. ಅಲಯನ್ಸ್ ಆ ನಿಟ್ಟಿನಲ್ಲಿ ಜಾಗತಿಕ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸುವ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಜೊತೆಗೆ ಬಲಿಷ್ಠ ಭಾರತ ನಿರ್ಮಾಣದಲ್ಲಿ ಭದ್ರ ಬುನಾದಿ ಹಾಕಲು ಬದ್ಧವಾಗಿದೆ ಎಂದರು.

ವೋಲ್ವೋ ಗ್ರೂಪ್‌ನ ಅಧ್ಯಕ್ಷ ಕಮಲ್ ಬಾಲಿ ಮಾತನಾಡಿ ಸುಲಭ ಸಾರಿಗೆಗೆ ಹೊಂದಿಕೊಳ್ಳುವ ನವೀಕರಿಸಬಹುದಾದ ಇಂಧನ, ಪರ್ಯಾಯ ಇಂಧನಗಳಾದ ಸೌರ ಶಕ್ತಿ, ವಿದ್ಯುತ್ ಶಕ್ತಿ, ಜಲ ಶಕ್ತಿಯ ಬಳಕೆಯ ಬಗ್ಗೆ ಪ್ರಸ್ತಾಪಿಸಿ ಮುಂದಿನ ದಶಕಗಳಲ್ಲಿ ಇಂಧನ ಬಳಕೆ ಸಂಪೂರ್ಣ ಇಲ್ಲವಾಗಿ ವಿದ್ಯುತ್ ಬಳಕೆ ಮುಂಚೂಣಿಗೆ ಬರಲಿದೆ. ಸೌರ, ಜಲ ಬಳಕೆಯಿಂದ ಉತ್ಪಾದನೆಯಾಗುವ ಶಕ್ತಿಯನ್ನು ವಿದ್ಯುತ್ ರೂಪದಲ್ಲಿ ಶೇಖರಿಸಿ ವಾಹನಗಳ ಬಳಕೆಗೆ, ಕೈಗಾರಿಕೆಗಳಲ್ಲಿ ಬಳಕೆಗೆ ವಿನಿಯೋಗವಾಗುವ ಸಾಧ್ಯತೆಗಳು ದಟ್ಟವಾಗಿದ್ದು ಬ್ಯಾಟರಿಗಳ ಉತ್ಪಾದನೆ, ಕ್ಷಮತೆ, ಧೀರ್ಘ ಬಾಳಿಕೆಯ ಜೊತೆಗೆ ರಕ್ಷಣೆ ದೊರಕಿಸಿಕೊಡುವ ಹಂತಗಳು



ಉದ್ಯೋಗಾಂಕ್ಷಿಗಳಿಗೆ ಉಜ್ವಲ ತಾಣಗಳಾಗಿವೆ. ಹಾಲಿ ಇರುವ ಇಂಧನ ಚಾಲಿತ ವಾಹನಗಳಿಗೆ ವಿದ್ಯುತ್ ವ್ಯವಸ್ಥೆ ಕಲ್ಪಿಸುವುದು ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು ಉತ್ತಮ ವಿಶ್ವದೆಲ್ಲೆಡೆ ಬೇಡಿಕೆ ಇರುವ ಮಾರುಕಟ್ಟೆಯಾಗಲಿದೆ. ರೋಬೋಟ್ ಯುಗದಲ್ಲಿ ಬುದ್ಧಿಮತ್ತೆ, ಸುಲಭ ಬಳಕೆ ಸಾಧನಗಳು, ತಾಂತ್ರಿಕ ಅನುಕೂಲತೆಗಳನ್ನು ಜೋಡಿಸಿಕೊಟ್ಟಲ್ಲಿ ಕಲ್ಪನೆಗೆ ನಿಟುಕದ ಎತ್ತರಕ್ಕೆ ಬೆಳೆಯಬಹುದಾಗಿದೆ. ಭಾರತ ಸರ್ಕಾರ ಸಂಶೋಧನೆ ಹಾಗೂ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕಿದ್ದು ಸಲಹಾ ಸಮಿತಿ ತಜ್ಞರು ಈ ಬಗ್ಗೆ ಸ್ಪಷ್ಟ ಹಾಗೂ ಶೀಘ್ರ ತೀರ್ಮಾನ ಕೈಗೊಳ್ಳಬೇಕಿದೆ ಎಂದರು.

ಸಮಾವೇಶದಲ್ಲಿ ಟಕ್ನಾಲಜಿ ಸರ್ವೀಸಸ್ ಅಧ್ಯಕ್ಷ ಡಾ. ಅಜಯ್‌ಪ್ರಭು, ಡೆಲ್ ಟೆಕ್ನಾಲಜಿಯ ಅಖಿಲಾ ಪ್ರಭಾಕರನ್, ತಜ್ಞರಾದ ಸಂಜೀವ್, ತರಂಗ್ ಗಾರ್ಗ್, ಬಾಲಾಜಿ ನಟರಾಜನ್, ಡಾ. ಅಬ್ರಹಾಮ್ ಜಾರ್ಜ್ ಮುಂತಾದ ಸಂಪನ್ಮೂಲ ವ್ಯಕ್ತಿಗಳು ಪ್ರಚಲಿತ ವಿದ್ಯಮಾನ, ಜಾಗತಿಕ ಬದಲಾವಣೆಯಲ್ಲಿ ಭಾರತದ ಪಾತ್ರ, ಭೂಮಿ ಎಂಬ ಉಪಗ್ರಹವನ್ನು ಮುಂದಿನ ಪೀಳಿಗೆಗೆ ಉಪಯುಕ್ತವಾಗಿ ಉಳಿಸಿಕೊಡುವ ವಿಷಯಗಳ ಉಪಯುಕ್ತ ಸಲಹೆಗಳನ್ನು ನೀಡಿದರು. ಅಲಯನ್ಸ್ ವಿವಿಯ ಡಾ. ಅನೂಭ ಸಿಂಗ್, ಸುರೇಖಾ ಇತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.